# ಇನ್ಫೋಸಿಸ್ ಮೈಸೂರ, ಗೋಕಾಕ್ ಟೆಕ್ಸ್‌ಟೈಲ್ ಮಿಲ್ಸ್‌ಗೆ ವಿಡಿಐಟಿ ವಿದ್ಯಾರ್ಥಿಗಳ ಭೇಟಿ




**ಹಳಿಯಾಳ:** ಕೆಎಲ್ಎಸ್ ವಿಡಿಐಟಿ ಹಳಿಯಾಳದ ಕಂಪ್ಯೂಟರ್ ಸೈನ್ಸ್ ವಿಭಾಗದ ಕೊನೆಯ ವರ್ಷದ ವಿದ್ಯಾರ್ಥಿಗಳು ಡಿಸೆಂಬರ್ 9 ರಂದು ಮೈಸೂರಿನಲ್ಲಿರುವ ಇನ್ಫೋಸಿಸ್ ಸಾಫ್ಟ್‌ವೇರ್ ಸಂಸ್ಥೆಯ ಕೇಂದ್ರಕ್ಕೆ ಭೇಟಿ ನೀಡಿದರು.

ಇನ್ಫೋಸಿಸ್ ಸಂಸ್ಥೆಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್‌ಗಳಾಗಿ ಕಾರ್ಯನಿರ್ಸುತ್ತಿರುವ ರಾಹುಲ್ ಮತ್ತು ಕೀರ್ತಿರಾಜ್ ಇನ್ಫೋಸಿಸ್ ಸಂಸ್ಥೆಯ ಕಾರ್ಯ ವೈಖರಿ ಮತ್ತು ಐ ಓ ಟಿ ತಂತ್ರಜ್ಞಾನದ ಕುರಿತು ಉದಾಹರಣೆ ಸಹಿತ ವಿವರಿಸಿದರು.

ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ವಿದ್ಯಾರ್ಥಿಗಳು ಕಾರ್ಯನಿರ್ವಹಿಸಲು ಹೊಂದಬೇಕಾದ ಕೌಶಲ್ಯಗಳ ಕುರಿತು ಮಾಹಿತಿ ನೀಡಿದರು. ಪ್ರೊ. ಭಗತ್ ಇನಾಮ್ದಾರ್, ಪ್ರೊ. ನವೀನ್ ಕುಮಾರ್ ಟಿ, ಮೈತ್ರಿ ಇವರೊಂದಿಗೆ 40 ವಿದ್ಯಾರ್ಥಿಗಳು ಇನ್ಫೋಸಿಸ್ ಸಂಸ್ಥೆಗೆ ಭೇಟಿ ನೀಡಿದ್ದರು.

ಕೊನೆಯ ವರ್ಷದ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿದ್ಯಾರ್ಥಿಗಳು ಬೆಳಗಾವಿ ಜಿಲ್ಲೆಯ ಗೋಕಾಕ್ ನಲ್ಲಿರುವ ಗೋಕಾಕ್ ಟೆಕ್ಸ್ ಟೈಲ್ಸ್ ಮಿಲ್ ಗೆ ಡಿಸೆಂಬರ್ 9ರಂದು ಭೇಟಿ ನೀಡಿದರು. ಕಚ್ಚಾ ಹತ್ತಿಯಿಂದ ಬೀಜ ಬೇರ್ಪಡಿಸಿ, ಬಟ್ಟೆ ತಯಾರಿಸಲು ಬೇಕಾಗುವ ದಾರವನ್ನು ಸಿದ್ಧಪಡಿಸುವ ವಿಧಾನವನ್ನು ಅಶೋಕ್ ವಿವರಿಸಿದರು. ಕಚ್ಚಾ ಹತ್ತಿಯಿಂದ ದಾರ ತಯಾರಿಕಾ ಹಂತದವರೆಗೆ ಬಳಸಲಾಗುತ್ತಿರುವ ವಿದ್ಯುತ್ ಚಾಲಿತ ಮೋಟಾರ್‌ಗಳ ವಿವರ ನೀಡಿದರು.

ಪ್ರೊ. ಶ್ರೀಪಾದರಾಜ ಇನಾಮ್ದಾರ್ ಮತ್ತು ಮಹಾಬಲೇಶ್ವರ ಪೂಜಾರಿ ಅವರ ಜೊತೆಗೆ 22 ವಿದ್ಯಾರ್ಥಿಗಳು ಗೋಕಾಕ್ ಟೆಕ್ಸ್ ಟೈಲ್ಸ್ ಮಿಲ್‌ಗೆ ಭೇಟಿ ನೀಡಿದ್ದರು.

ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥ ಡಾ. ಶ್ರೀನಿವಾಸ ಸರ್ದೇಶ್ ಪಾಂಡೆ ಮತ್ತು ಎಲೆಕ್ಟ್ರಿಕಲ್ ವಿಭಾಗದ ಮುಖ್ಯಸ್ಥ ಪ್ರೊ. ಅಲ್ಲಮಪ್ರಭು ಕೊಳಕಿ ಈ ಕಾರ್ಯಕ್ರಮವನ್ನು ಸಂಯೋಜಿಸಿದ್ದರು. ವಿದ್ಯಾರ್ಥಿ ಗಳಿಗೆ ಕೈಗಾರಿಕಾ ಕ್ಷೇತ್ರ ಬಯಸುವ ಕೌಶಲ್ಯಗಳನ್ನು ಮತ್ತು ಕೈಗಾರಿಕಾ ಕ್ಷೇತ್ರದ ಬೆಳವಣಿಗೆ ತಿಳಿದುಕೊಳ್ಳಲು ಈ ಕಾರ್ಯಕ್ರಮಗಳು ಸಹಕಾರಿಯಾಗುವುದು ಎಂದು ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕನ್ನಡಪ್ರಭ

KP




ಕೆಎಲ್ಎಸ್ ವಿಡಿಐಟಿ ಹಳಿಯಾಳದ ಕಂಪ್ಯೂಟರ್ ಸೈನ್ಸ್ ವಿಭಾಗದ ಕೊನೆಯ ವರ್ಷದ ವಿದ್ಯಾರ್ಥಿಗಳು ಮೈಸೂರಿನಲ್ಲಿರುವ ಇನ್ಫೋಸಿಸ್ ಸಾಫ್ಟ್‌ವೇರ್ ಸಂಸ್ಥೆಯ ಕೇಂದ್ರಕ್ಕೆ ಭೇಟಿ ನೀಡಿದರು.

UTTARA KANNADA Edition
Dec 11, 2023 Page No. 02
Powered by : eReleGo.com